## ಅನುವಾದಿತ ಕತೆ

ನಾಜೂಕಿನ, ರೂಪವಂತೆ ಬೇಗಮ್ ಅಸಹನೀಯ ಒಂಟಿತನದಿಂದ ಕೊರಗಲಾರಂಭಿಸಿದಳು.

ಬೇಗಮ್ ಜಾನ್‌ಳ ಬಾಳು ಶುರುವಾದದ್ದು ಯಾವತ್ತೆಂದು ಯಾರಿಗೆ ಗೊತ್ತು? ಅವಳು ಹುಟ್ಟಿದ ತಪ್ಪು ಮಾಡಿದಾಗಲೋ, ನವಾಬನ ವಧುವಾಗಿ ಅವನ ಮನೆಗೆ ಬಂದು ಅವನ ವಿಶಾಲವಾದ ನಾಲ್ಕು ಕಂಬಗಳ ಮಂಚವನ್ನು ಹತ್ತಿ ದಿನಗಳನ್ನು ಎಣಿಸಲು ಶುರು ಮಾಡಿದಾಗಲೋ ಅಥವಾ ಅವಳು ಹಜಾರದ ಬಾಗಿಲ ಮೂಲಕ ಹೆಚ್ಚೆಚ್ಚು ಸಂಖ್ಯೆಯಲ್ಲಿ, ಸುಪುಷ್ಟ ಕಾಲುಗಳ, ಬಳುಕು ನಡುವಿನ ಹುಡುಗರನ್ನೂ, ಅವರಿಗಾಗಿ ಅಡುಗೆಮನೆಯಿಂದ ಸರಬರಾಜಾಗುತ್ತಿದ್ದ ಭಕ್ಷ್ಯಗಳನ್ನೂ ನೋಡಿದಾಗಲೋ? ಅತ್ತರಿನ ಸುವಾಸನೆಯುಳ್ಳ, ಬಿಗಿಯಾದ ಅಂಗಿ ಧರಿಸಿದ ಅವರನ್ನು ನೋಡಿದಾಗ ಬೇಗಂ ಜಾನಳಿಗೆ ಸುಡುವ ಕೆಂಡದ ಮೇಲಿಂದ ಹಾದು ಹೋದಂತೆಯೇ ಅನಿಸುತ್ತಿತ್ತು.

ಅವಳು ಮಂತ್ರ ತಂತ್ರ ತಾಯಿತ ಹಾಗೂ ಹಾದಿತಪ್ಪಿದ ಗಂಡನ ಪ್ರೀತಿಯನ್ನು ಮರಳಿ ಗಳಿಸುವ ಇತರ ಪ್ರಯತ್ನಗಳನ್ನು ಕೈ ಬಿಟ್ಟಾಗಲೋ? ಅವಳು ರಾತ್ರಿಯಿಡೀ ಕುರಾನ್‌ನ ಪಠಣವನ್ನು ಇಡಿಸಿದ್ದು ವ್ಯರ್ಥವಾಗಿತ್ತು. ಕಲ್ಲಿನಿಂದ ರಕ್ತ ತೆಗೆಯಲಾಗುವುದೇ? ನವಾಬ ಮಿಸುಕಾಡಲಿಲ್ಲ. ಬೇಗಮ್ ಜಾನ್‌ಳ ಹೃದಯ ಒಡೆದು ಚೂರಾಗಿ ಪುಸ್ತಕಗಳ ಮೊರೆ ಹೋದಳು. ಆದರೂ ಬಿಡುಗಡೆ ಸಿಗಲಿಲ್ಲ. ಪ್ರೇಮದ ಕತೆಗಳು, ಭಾವಪೂರಿತ ಸಾಲುಗಳು ಅವಳನ್ನು ಖಿನ್ನಳಾಗಿಸಿದವು. ಯಾವತ್ತೂ ಅನುಭವಿಸದ ಪ್ರೇಮಕ್ಕಾಗಿ ಹಂಬಲಿಸುತ್ತಾ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯತೊಡಗಿದಳು.

ಅವಳಿಗೆ ಎಲ್ಲಾ ವಸ್ತ್ರಗಳನ್ನು ಬೆಂಕಿಗೆ ಹಾಕೋಣವೆನಿಸುತ್ತಿತ್ತು. ಯಾರನ್ನು ಮೆಚ್ಚಿಸಲು ಬಟ್ಟೆಗಳನ್ನು ತೊಡುವುದು? ನವಾಬನ ಬಳಿ ಅವಳಿಗಾಗಿ ಒಂದು ಕ್ಷಣವೂ ಇರಲಿಲ್ಲ. ಪಾರದರ್ಶಕ ಅಂಗಿಗಳ ಹಿಂದೆ ಓಡುವುದರಲ್ಲಿ ಅವನು ನಿರತನಾಗಿದ್ದ. ಅವಳನ್ನು ಹೊರಗೆ ಹೋಗಲೂ ಬಿಡುತ್ತಿರಲಿಲ್ಲ. ಸಂಬಂಧಿಕರು ಮಾತ್ರ ಆಗಾಗ ಬಂದು ತಿಂಗಳುಗಟ್ಟಲೆ ತಂಗುತ್ತಿದ್ದರು. ಪುಗಸಟ್ಟೆ ತಿನ್ನಲು ಬರುವ ಈ ಸಂಬಂಧಿಕರನ್ನು ಕಂಡರೆ ಅವಳ ರಕ್ತ ಕುದಿಯುತ್ತಿತ್ತು. ಅವರು ಮೃಷ್ಟಾನ್ನ ಉಂಡು ಬೇಕಾದಂತೆ ಬೆಚ್ಚಗಿನ ಹೊಸ ಬಟ್ಟೆಗಳನ್ನು ಹೊಲಿಸಿಕೊಂಡರೆ ಇವಳು ಹೊಸ ಹತ್ತಿ ತುಂಬಿಸಿದ ರಜಾಯಿಯೊಳಗೆ ಚಳಿಯಿಂದ ಕೊರಡಾಗುತ್ತಿದ್ದಳು. ಮಗ್ಗುಲು ಬದಲಿಸುತ್ತಾ, ಹೊರಳುವಾಗ, ಅವಳ ರಜಾಯಿ ಗೋಡೆಯ ಮೇಲೆ ಹೊಸ ಹೊಸ ಆಕಾರಗಳನ್ನು ಹಾಯಿಸುತ್ತಿದ್ದರೂ ಅದರಲ್ಲಿ ಬಾಳಿನ ಭರವಸೆ ಒಂದಿನಿತೂ ಇರಲಿಲ್ಲ. ಯಾಕಾದರೂ ಬದುಕಿರಬೇಕು? ಅದೂ ಅವಳು ನಡೆಸುತ್ತಿದ್ದಂತಹ ಜೀವನ... ಹೀಗಿದ್ದಾಗಲೇ ಬೇಗಮ್ ಜಾನ್ ಜೀವಿಸತೊಡಗಿದಳು ಮತ್ತು ಸಂತುಷ್ಟ ಬಾಳನ್ನು ಬಾಳಿದಳು.

ಅವಳನ್ನು ಪತನದಿಂದ ಉಳಿಸಿದವಳು ರಬ್ಬು.

ಶೀಘ್ರವೇ ಅವಳ ಬಡಕಲು ದೇಹ ತುಂಬಿಕೊಳ್ಳತೊಡಗಿತು. ಕೆನ್ನೆಗಳು ಹೊಳೆಯತೊಡಗಿ ಅರಳಿದ ಹೂವಿನಂತಾದಳು. ಅರ್ಧ ಸತ್ತಂತಿದ್ದ ಬೇಗಮ್ ಜಾನಳಲ್ಲಿ ಜೀವನೋಲ್ಲಾಸವನ್ನು ತಂದದ್ದು ಒಂದು ವಿಶಿಷ್ಟ ಎಣ್ಣೆಯ ಮಸಾಜ್. ಕ್ಷಮಿಸಿ, ಈ ಎಣ್ಣೆ ತಯಾರಿಸುವ ವಿಶಿಷ್ಟ ವಿಧಾನ ಮಾತ್ರ ನಿಮಗೆ ಎಲ್ಲಿಯೂ ಸಿಗಲಾರದು.

ನಾನು ಬೇಗಮ್ ಜಾನ್‌ಳನ್ನು ಮೊದಲ ಬಾರಿಗೆ ನೋಡಿದಾಗ ಅವಳು ನಲವತ್ತರ ಆಸುಪಾಸಿನಲ್ಲಿದ್ದಳು. ಘನತೆಯೇ ಮೂರ್ತಿವೆತ್ತಂತೆ ಸೋಫಾದ ಮೇಲೆ ಕುಳಿತಿದ್ದಳು. ರಬ್ಬು ಅವಳ ಹಿಂದೆ ಕುಳಿತು ಅವಳ ಸೊಂಟವನ್ನು ತಿಕ್ಕುತ್ತಿದ್ದಳು. ಮಹಾರಾಣಿಯಂತೆ ರಾಜಗಾಂಭೀರ್ಯದಲ್ಲಿ ಕುಳಿತಿದ್ದವಳ ಕಾಲುಗಳ ಮೇಲೆ ನೇರಳೆಬಣ್ಣದ ಶಾಲನ್ನು ಹೊದಿಸಲಾಗಿತ್ತು.

ಮೋಡಿ ಮಾಡುವಂತಿದ್ದ ಅವಳ ರೂಪಿಗೆ ಮಾರುಹೋಗಿದ್ದ ನನಗೆ ಗಂಟೆಗಟ್ಟಲೆ ಅವಳನ್ನು ನೋಡುತ್ತಲೇ ಕುಳಿತಿರುವ ಆಸೆಯಾಗುತ್ತಿತ್ತು. ಒಂದು ಚೂರೂ ಕೆಂಪು ಕಲೆಯಿಲ್ಲದ ಶುಭ್ರ ಬಿಳುಪಿನ ಅಮೃತಶಿಲೆಯಂತಹ ಬಣ್ಣ ಅವಳದ್ದು. ತಲೆಯ ಬೈತಲೆ ಯಾವತ್ತೂ ಓರೆಯಾಗಿದ್ದು ಎಂದಿಲ್ಲ, ಒಂದೇ ಒಂದು ಕೂದಲು ಆ ಕಡೆ ಈ ಕಡೆ ಆಗಿರುತ್ತಿರಲಿಲ್ಲ. ಅವಳ ಕಣ್ಣುಗಳ ಬಣ್ಣ ಕಡುಗಪ್ಪು ಮಾಟವಾಗಿ ಆಕಾರ ಕೊಟ್ಟ ಹುಬ್ಬುಗಳು ಅವಳ ನಮ್ರ ಕಣ್ಣುಗಳ